# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 586 |
| ಸದಸ್ಯರ ಹೆಸರು | : | ಶ್ರೀ ಎಸ್. ರವಿ<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 20.02.2024 |
| ಉತ್ತರಿಸುವ ಸಚಿವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯಿಂದ ಸರ್ಕಾರವು ಜಾರಿಗೊಳಿಸುತ್ತಿರುವ ಯೋಜನೆಗಳು ಯಾವುವು; ಈ ಯೋಜನೆಗಳ ಮಾನದಂಡಗಳೇನು; (ವಿವರ ನೀಡುವುದು) | ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ವ್ಯಾಪ್ತಿಗೆ ವಿಮಾನನಿಲ್ದಾಣ ಯೋಜನೆಗಳು, ರೈಲ್ವೆ ಯೋಜನೆಗಳು ಮತ್ತು ಪಿಪಿಪಿ ಯೋಜನೆಗಳು ಬರುತ್ತದೆ.<br><br>**ವಿಮಾನನಿಲ್ದಾಣ ಯೋಜನೆಗಳು:**<br><br>ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯಿಂದ ಶಿವಮೊಗ್ಗ, ವಿಜಯಪುರ, ಹಾಸನ ಮತ್ತು ರಾಯಚೂರು ವಿಮಾನ ನಿಲ್ದಾಣ ಅಭಿವೃದ್ಧಿ ಯೋಜನೆಗಳು, ಬಿ.ಎಸ್.ಬಿ.ಪಿ. ಯೋಜನೆ ಹಾಗೂ ಮೈಸೂರು ವಿಮಾನನಿಲ್ದಾಣದ ರನ್-ವೇ ವಿಸ್ತರಣೆ ಯೋಜನೆಗಳನ್ನು ಪ್ರಸಕ್ತ ಸಾಲಿನಲ್ಲಿ ಕೈಗೊಳ್ಳಲಾಗುತ್ತಿದೆ. ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಿದೆ.<br><br>**ವಿಮಾನನಿಲ್ದಾಣ ಯೋಜನೆ ಮಾನದಂಡಗಳು:**<br><br>1. ರಾಜ್ಯದ ವಿಮಾನನಿಲ್ದಾಣಗಳನ್ನು ಕೇಂದ್ರ ಸರ್ಕಾರದ ನ್ಯಾಷನಲ್ ಸಿವಿಲ್ ಏವಿಯೇಷನ್ ಪಾಲಿಸಿ 2016ರಂತೆ ಅಭಿವೃದ್ಧಿ ಪಡಿಸಲಾಗುತ್ತಿದೆ.<br>2. ರಾಜ್ಯದ ವಿಮಾನನಿಲ್ದಾಣ ಯೋಜನೆಗಳನ್ನು Directorate General of Civil Aviation (DGCA)/ Bureau of Civil Aviation Security (BCAS)/ Airports Authority of India (AAI) ರವರ ಮಾರ್ಗಸೂಚಿಗಳನ್ನು ಅನುಸರಿಸಿ ಅಭಿವೃದ್ಧಿಪಡಿಸಲಾಗುತ್ತಿದೆ.<br><br>**ರೈಲ್ವೆ ಯೋಜನೆಗಳು:**<br><br>ರಾಜ್ಯದಲ್ಲಿ ಗಿಣಿಗೇರಾ-ರಾಯಚೂರು, ತುಮಕೂರು-ರಾಯದುರ್ಗ, ಚಿಕ್ಕಮಗಳೂರು-ಬೇಲೂರು, ಕುಡಚಿ-ಬಾಗಲಕೋಟೆ, ಗದಗ-ವಾಡಿ, ತುಮಕೂರು-ದಾವಣಗೆರೆ, ಬೇಲೂರು-ಹಾಸನ, ಶಿವಮೊಗ್ಗ-ಶಿಕಾರಿಪುರ-ರಾಣಿಬೆನ್ನೂರು ಮತ್ತು ಧಾರವಾಡ-ಕಿತ್ತೂರು-ಬೆಳಗಾವಿ ಈ 09 ನೂತನ ರೈಲ್ವೆ ಮಾರ್ಗ ಯೋಜನೆಗಳು ಪ್ರಸಕ್ತ ಸಾಲಿನಲ್ಲಿ ಪ್ರಗತಿಯಲ್ಲಿವೆ.<br><br>ರಾಜ್ಯದಲ್ಲಿ ರೈಲ್ವೆ ಲೆವೆಲ್ ಕ್ರಾಸಿಂಗ್ ಗೇಟ್ ಗಳ ಬದಲಿಗೆ ರಸ್ತೆ ಮೇಲ್ಸೇತುವೆ/ಕೆಳಸೇತುವೆ ನಿರ್ಮಾಣ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ. ವಿವರಗಳನ್ನು **ಅನುಬಂಧ- 2** ರಲ್ಲಿ ಒದಗಿಸಿದೆ. |

ಪುಟ-2

| | | |
|---|---|---|
| | | **<u>ರೈಲ್ವೆ ಯೋಜನೆಗಳ ಮಾನದಂಡಗಳು:</u>**<br>1. ರಾಜ್ಯದ ರೈಲ್ವೆ ಯೋಜನೆಗಳ ಭೂಸ್ವಾಧೀನ ವೆಚ್ಚವನ್ನು ರಾಜ್ಯ ಸರ್ಕಾರವೇ ಭರಿಸುತ್ತಿದೆ.<br>2. ರಾಜ್ಯದ ನೂತನ ರೈಲು ಮಾರ್ಗದ ಯೋಜನೆಗಳ ವೆಚ್ಚವನ್ನು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಕ್ರಮವಾಗಿ ಶೇಕಡ 50:50 ರಂತೆ ಭರಿಸುತ್ತಿವೆ.<br>3. ರೈಲ್ವೇ ಮೇಲ್ಸೇತುವೆ / ಕೆಳಸೇತುವೆಗಳನ್ನು ರೈಲ್ವೆ ಇಲಾಖೆಯ ನಿಯಮಾವಳಿಗಳ ಪ್ರಕಾರ ನಿರ್ಮಿಸಲಾಗುತ್ತಿದೆ.<br><br>**<u>ಪಿಪಿಪಿ ಯೋಜನೆಗಳು:</u>**<br>ವಿವಿಧ ಆಡಳಿತ ಇಲಾಖೆಗಳು ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಯೋಜನೆಗಳಿಗೆ ಅಗತ್ಯ ಸಲಹೆ ಮತ್ತು ಸಹಕಾರ ನೀಡುವುದು ಹಾಗೂ ವಿವಿಧ ಆಡಳಿತ ಇಲಾಖೆಗಳು ಅನುಷ್ಠಾನಗೊಳಿಸುವ ಪಿಪಿಪಿ ಯೋಜನೆಗಳಿಗೆ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆ (SLSWA) ಸಭೆಯಲ್ಲಿ ಯೋಜನಾ ಅನುಷ್ಠಾನಕ್ಕಾಗಿ ಅನುಮೋದನೆ ಪಡೆಯುವದು.<br><br>ರಾಜ್ಯದಲ್ಲಿ City Gas Distribution(CGD) ಯೋಜನೆಗಳಿಗೆ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯು ನೋಡಲ್ ಇಲಾಖೆಯಾಗಿದ್ದು, ಕಾಮಗಾರಿಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸುವ ಸಂಬಂಧ ಎಲ್ಲಾ ಪಾಲುದಾರರೊಂದಿಗೆ (Stake-holders) ಸಮನ್ವಯವನ್ನು ಸಾಧಿಸುವುದು.<br><br>**<u>ಪಿಪಿಪಿ ಯೋಜನೆ ಮಾನದಂಡಗಳು:</u>**<br>1. ಸಾರ್ವಜನಿಕ ಖಾಸಗಿ ಸಹಭಾಗತ್ವ ನೀತಿ-2018<br>2. ನಗರ ಅನಿಲ ಯೋಜನೆಗಳಿಗೆ ರಾಜ್ಯದ ನೀತಿ (State City Gas Distribution (CGD) Policy)<br>3. Petroleum and Natural Gas Regulatory Board (PNGRB) Act-2006 |
| (ಆ) | ಕಳೆದ 3 ವರ್ಷಗಳಲ್ಲಿ ಈ ಯೋಜನೆಗಳಡಿ ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಿಗೆ ಬಿಡುಗಡೆ ಮಾಡಿದ ಅನುದಾನವೆಷ್ಟು; ಈ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳು ಯಾವುವು; (ಸಂಪೂರ್ಣ ವಿವರ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಲ್ಲಿ ಯಾವುದೇ ಯೋಜನೆ / ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ. |

ಸಂಖ್ಯೆ:ಮೂಅಇ 9 ಯುಐಪಿ 2024

**(ಎಂ.ಬಿ.ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ
ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

# <u>ಅನುಬಂಧ-1</u>

1. **ಶಿವಮೊಗ್ಗ ವಿಮಾನನಿಲ್ದಾಣವು** 27ನೇ ಫೆಬ್ರುವರಿ 2023 ರಂದು ಉದ್ಘಾಟನೆಯಾಗಿರುತ್ತದೆ. ಸದರಿ ವಿಮಾನನಿಲ್ದಾಣಕ್ಕೆ ಅಗತ್ಯವಿದ್ದ ಮೂಲಸೌಲಭ್ಯಗಳು ಹಾಗೂ ಮಾನವ ಸಂಪನ್ಮೂಲಗಳನ್ನು ಒದಗಿಸಿ, ದಿನಾಂಕ: 31.08.2023 ರಂದು ಬೆಂಗಳೂರು-ಶಿವಮೊಗ್ಗ ಮಾರ್ಗದಲ್ಲಿ ವಿಮಾನಯಾನವನ್ನು ಪ್ರಾರಂಭಿಸಲಾಗಿದೆ.

2. **ವಿಜಯಪುರ ವಿಮಾನನಿಲ್ದಾಣವನ್ನು** ಶ್ರೀ ಎಂ.ಬಿ. ಏರ್‌ಬಸ್-320 ಮಾದರಿಯ ವಿಮಾನ ಕಾರ್ಯಾಚರಣೆಗೆ ಅನುವಾಗುವಂತೆ ಅಂದಾಜು ಮೊತ್ತ ರೂ.347.92 ಕೋಟಿಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗತ್ತಿದೆ. ವಿಜಯಪುರ ವಿಮಾನನಿಲ್ದಾಣದ ಕಾಮಗಾರಿಗಳು ಫೆಬ್ರುವರಿ-2024ರಲ್ಲಿ ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ.

3. **ಹಾಸನದಲ್ಲಿ** ಎಟಿಆರ್-72 ವಿಮಾನಗಳ ಹಾರಾಟಕ್ಕೆ ಅನುವಾಗುವಂತೆ ಅಂದಾಜು ಮೊತ್ತ ರೂ 193.76 ಕೋಟಿಗಳಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. **ಹಾಸನ ವಿಮಾನನಿಲ್ದಾಣ** ಅಭಿವೃದ್ಧಿಗಾಗಿ ಇಲ್ಲಿಯವರೆಗೆ ರೂ.164.70 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಹಾಸನ ವಿಮಾನನಿಲ್ದಾಣದ ಕಾಮಗಾರಿಗಳು 2024-25 ರಲ್ಲಿ ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ.

4. **ಮೈಸೂರು ವಿಮಾನನಿಲ್ದಾಣದ** ರನ್‌ವೇ ವಿಸ್ತರಣೆಯ ಭೂಸ್ವಾಧೀನಕ್ಕಾಗಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಮೈಸೂರು ವಿಮಾನನಿಲ್ದಾಣದ ರನ್‌ವೇ ವಿಸ್ತೀರ್ಣದ ಭೂಸ್ವಾಧೀನಕ್ಕೆ ಇಲ್ಲಿಯವರೆಗೆ ರೂ.276.13 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

5. **ರಾಯಚೂರು ವಿಮಾನನಿಲ್ದಾಣವನ್ನು** ರೂ.219.00 ಕೋಟಿಗಳಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ. 2023-24ನೇ ಸಾಲಿನ ಜುಲೈ ಮಾಹೆಯ ಆಯವ್ಯಯ ಘೋಷಣೆಯ ನಂತರ ರೂ.18.71 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಮಾರ್ಚ್-2025ಕ್ಕೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

# ಅನುಬಂಧ - II

| Sl.No | Project | LC No |
|---|---|---|
| 1 | Hubballi -Kusgal ( Hosapete) Section near NH - 63 | 1 |
| 2 | Chittapura, Kalaburagi | 3A |
| 3 | Bangarapete - Mariguppam division near Origham Km. 11/600-700 | 7 |
| 4 | Kengeri - Hejjala | 16 |
| 5 | Rajanukunte - Doddaballapura | 27 |
| 6 | Doddaballapura - Oddarahalli | 32 |
| 7 | Between Beeruru - Talaguppa Km. 43 | 32 |
| 8 | Gadag- Hombal Stations @ Km.56/300-400 | 32 |
| 9 | Bidar | 43 A |
| 10 | Bidar | 45 & 46 |
| 11 | Bengaluru - Mysuru | 47 |
| 12 | Shivamogga | 48 |
| 13 | Bhagyanagar - Koppal | 62 & 64 |
| 14 | Afzalpura Road near Gulabarga | 83 B |
| 15 | Construction of approach road near Mother Theresa School near new Jevargi Road, Kalaburagi. | Bridge No.567/1 |
| 16 | Vajra Hanuman Temple at Vijayapura Town | 80 |
| 17 | Srirangapatna - Naganahalli | 101 |
| 18 | Bellari - Bellari Cantt. 204/700-800 | 110 |
| 19 | Bellari | 111 |
| 20 | Hubballi - Guntakal | 112 |
| 21 | Bellary - Sathyanarayanapet | 114 |
| 22 | Bangarapete - Maralahalli | 116 |
| 23 | Byatarayanahalli - Taykal | 120 |
| 24 | Devanagundi - Hosakote | 129 |
| 25 | Pedal Bajaar Road near Mangalore | 146 B |
| 26 | Davanagere - Harihara Section | KM326/10-327 |
| 27 | Londa - Meeraj | 385 |
| 28 | Yalahanka-Rajanakunte | 21 |
| 29 | Hubballi - Meeraj | 388A |
| 30 | Rayabhag - Chinchili Londa - Miraj Section | 438 |
| 31 | Chinnadagudihundi and Badanaguppe Mysore Chamarajanagara Section | 27 & 47 |
| 32 | Naganahalli Yard | Km 129/900-130/000 |
| 33 | Desur - Belagavi Station, Belagavi | 381 |
| 34 | Byadagi -Motebennur Byadagi Yard, Haveri | 227 |
| 35 | kuditini yard Between Hospete- Bellary station. | 102 |
| 36 | Hbrhimpura - Vijayaopura stations (Gadag-Hutagi) | 81 |

| | | |
|---|---|---|
| 37 | Hassan-Sakleshpur | 03 Km.1/600-700 |
| 38 | Holenarisepura -Mavinekere | 79 |
| 39 | Holenarisepura -Mavinekere | 78 |
| 40 | Tiptur Railway Station | 84 |
| 41 | Koppal -Ginegera | 66 |
| 42 | Bhadravathi-Shimoga | 34 |
| 43 | Shiomga-talaguppa | 49 |
| 44 | Shimoga-Kumsi | 52 |
| 45 | Kyatasandra Station between Bengaluru-Tumkuru Railway | 37 |
| 46 | Construction of ROB in lieu of LC No.297 section between Hubli-Dharwad in Dharwad | 297 |
| 47 | Construction of ROB in lieu of LC No.21 between Rajanagunta -Doddaballpur | 21 |
| 48 | Construction of ROB in lieu of LC No.85 between Hubballi-Ballari section | 85 |
| 49 | Construction of ROB in lieu of LC No.299 between Hubballi-Dharwad | 299 |
| 50 | Construction of ROB in lieu of LC No.300 between Hubballi-Dharwad | 300 |
| 51 | Construction of ROB in lieu of LC No.219 section between Ranebennur -Devaragudda stations | 219 |